**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**S.C. No. 140/2024**

| ಸಾಕ್ಷಿಯ ಹೆಸರು | ಶ್ರೀ. ಚಂದ್ರ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಗಂಗಯ್ಯ | 3 | 2 |
| ವಯಸ್ಸು | 41 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **10.02.2026.** | |
| ಉದ್ಯೋಗ | ಕೇಬಲ್ ಕೆಲಸ | | |
| ವಾಸ ಸ್ಥಳ | ಆನಂದ್ ನಗರ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರು ಗೊತ್ತಿಲ್ಲ. ಪಿರ್ಯಾದಿ ಗೊತ್ತು. ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ಆರೋಪಿತರು ಪಿರ್ಯಾದಿಗೆ ಅಪಹರಣ ಮಾಡಿಕೊಂಡು ಹೋಗಿ ಹಲ್ಲೆ ಮಾಡಿದ ವಿಚಾರ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ನಾನು ಕೇಬಲ್ ಕೆಲಸ ಮಾಡಿಕೊಂಡಿದ್ದು ಮತ್ತು ದಿನಾಂಕ 08.01.2017 ರಂದು ಬೆಳಗ್ಗೆ ರಾಜೇಶ್ ನನಗೆ ಫೋನ್ ಮಾಡಿ ಈವತ್ತು ನನ್ನ ಹುಟ್ಟುಹಬ್ಬ ತಿಪ್ಪಗೊಂಡನಹಳ್ಳಿಗೆ ಬಾ ಎಂದು ಕರೆದಿದ್ದು ನಾನು ಅಲ್ಲಿಗೆ ಬೆಳಗ್ಗೆ 11.00 ಕ್ಕೆ ಹೋಗಿದ್ದು ಅಲ್ಲಿ ರಾಜೇಶ್ ಮತ್ತು ಕಿರಣ್ ಅಲ್ಲಿ ನಿಂತಿದ್ದು, ರಾಜೇಶ ಗೆ ನಾನು ಹುಟ್ಟು ಹಬ್ಬದ ಶುಭಾಷಯಗಳು ಹೇಳಿದೆ ಎಂದರೆ ಸರಿ ಅಲ್ಲ. ಬೈಕ್ ಮತ್ತು ಕಾರಿನಲ್ಲಿ 10 – 15 ಜನ ಬಂದು ಶುಭಾಶಯಗಳು ಹೇಳಿದ್ದು ಹಾಗೂ ರಾಜೇಶ್ ಬೆಂಗಳೂರಿನಿಂದ ಬಿರಿಯಾನಿ ಕೇಕ್ ತರಿಸಿದ್ದಾನೆ ಡ್ರಿಂಕ್ಸ ಕೊಡಿಸಬೇಕು ಎಂದು ಹೇಳಿದ್ದು ನಾನು ಟ-ಬೇಗೂರಿನ ಬಳಿ ಡ್ರಿಂಕ್ಸ ತೆಗೆದುಕೊಂಡಿದು ದಾಲ್ಮಿಯ ಲೇಔಟ್ ನಲ್ಲಿ ಜಾಗ ಚೆನ್ನಾಗಿದೆ ಎಂದುಹೇಳಿದ್ದು ಅದಕ್ಕೆ ರಾಜೇಶ್ ಒಪ್ಪಿಕೊಂಡ ಎಂದರೆ ಸರಿ ಅಲ್ಲ. ನಂತರ ಸುಮಾರು

1 ಗಂಟೆಗೆ ಸದರಿ ಲೇಔಟ್ ಹೋಗಿ ಆಲದ ಮರದ ಕೆಳಗೆ ಸೇರಿದ್ದು ಊಟ ಮಾಡಿ ಡ್ರಿಂಕ್ಸ ಮಾಡಿ ಕೇಕ್ ಕಟ್ ಮಾಡೋಣಾ ಎಂದು ಹೇಳಿದ್ದು ಸಂಜೆ 5.30 ಕ್ಕೆ ಕೇಕ್ ಅನ್ನು ಕತ್ತರಿಸಿ ತಿನ್ನುತ್ತಿದ್ದಾಗ ರಾಜ ಮತ್ತು ನಿರಂಜನ್ ಬಾಬು ಬೈಕ್ ನಲ್ಲಿ ಊರಿಗೆ ಹೋಗುತ್ತಿದ್ದಾಗ ನಾನು ಅವರನ್ನು ಕರೆದು ಕೇಕ್ ಕೊಟ್ಟಿದ್ದು ನಂತರ ಅವರುಗಳು ಜಗಳ ಮಾಡಿಕೊಂಡು ನಿರಂಜನ್ ಬಾಬುಗೂ ಬೈದರು ಹಾಗೂ ಹೊಡೆದರು ಎಂದರೆ ಸರಿ ಅಲ್ಲ. ಆತನಿಗೆ ಹೊಡೆಯಲು ಹೋದಾಗ ರಾಜಾ ಬಿಡಿಸಿದ್ದು ನಂತರ 3 ಜನರು ನೀನು ಯಾರೋ ಕೇಳಲು ಎಂದು ಬೈದರು ನಂತರ ರಾಜನಿಗೆ ಕೈಗಳಿಂದ ಹೊಡೆದು ಅಲ್ಲೇ ಇದ್ದ ಕಾರಿನಲ್ಲಿ ಹಾಕಿಕೊಂಡು ಕೊಲೆ ಮಾಡುವ ಉದ್ದೇಶದಿಂದ ಒಂದು ಗತಿ ಕಾಣಿಸುತ್ತೇವೆ ಎಂದು ಹೋದರು ಎಂದರೆ ಸರಿ ಅಲ್ಲ. ನಂತರ ನಾನು ಮತ್ತು ನಿರಂಜನ್ ಊರಿಗೆ ಹೋದೆವು ಎಂದರೆ ಸರಿ ಅಲ್ಲ. ನಂತರ ರಾಜುವನ್ನು ಮಾತೃಶ್ರೀ ಆಸ್ಪತ್ರೆಯಲ್ಲಿ ದಾಖಲು ಮಾಡಿದ ಬಗ್ಗೆ ಗೊತ್ತಾಗಿ ನಾನು ಹೋಗಿ ವಿಚಾರ ಮಾಡಿದಾಗ ಆರೋಪಿತರು ಆತನನ್ನು ಕಾರಿನಲ್ಲಿ ಸುತ್ತಾಡಿಸಿ ಹಲ್ಲೆ ಮಾಡಿ ಹೆದರಿಸಿದರು ಎಂದು ಹೇಳಿದ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 6 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.